ಮುರಲೀಧರ ಕುಲಕರ್ಣಿ, ಬೀದರ್

*ಓದುಗರು ಕೇಳುವ ಯಕ್ಷಪ್ರಶ್ನೆಗಳಿಗೆಲ್ಲ ನೀವು ಉತ್ತರಿಸುತ್ತೀರಿ. ಧರ್ಮರಾಜನಿಗಿದ್ದಂತಹ ಅನಿವಾರ್ಯತೆ ನಿಮಗೇನಿದೆ?*



ಜಗದ ದುಗುಡದ ಪ್ರಮಾಣ ಕಡಿಮೆ ಮಾಡಲು ಯತ್ನಿಸುವುದು ಪ್ರತಿ ಹಾಸ್ಯಸಾಹಿತಿಗೆ ಅನಿವಾರ್ಯ, ಜವಾಬ್ದಾರಿ ಸರ್.

ಬಿ. ಚಂದ್ರೇಗೌಡ, ಬೆಂಗಳೂರು

*ಮದುವೆ ಅಗ್ನಿಸಾಕ್ಷಿಯಾಗಿ ಘಟಿಸುವುದೇಕೆ?*

ಮದುವೆಯೂ ಅಗ್ನಿಯಂತೆಯೇ ಎಂದೂ ಮೇಲ್ಮುಖವಾಗಿಯೇ ಸಾಗಲೆಂದು ಸೂಚಿಸಲು.

ಮಹಾವೀರ ಕಾಸರ, ಶಿವಮೊಗ್ಗ

*ಸುಲಭವಾಗಿ ದುಡ್ಡು ಮಾಡುವುದು ಹೇಗೆ?*

ಯಾರ ಮನೆ ರೈಡ್ ಆಗುತ್ತದೆಂದು ತಿಳಿದು, ಆಚೆ ನಿಂತು, ಎಸೆದಿದ್ದನ್ನೆಲ್ಲಾ ಕ್ಯಾಚ್ ಹಿಡಿದು ಓಡಿರಿ.

ಎ. ಕೃಷ್ಣಾನಂದ ಶೆಟ್ಟಿ, ಮುಲ್ಕಿ

*ತಂದೆ-ತಾಯಿಯರಿಗೆ ಬಾಳಲ್ಲಿ ಅನ್ನ ಕೊಡದಿದ್ದರೂ ಚಿಂತೆ ಇಲ್ಲ. ಆದರೆ ಕಣ್ಣೀರು ಕೊಟ್ಟರೆ ಮಕ್ಕಳನ್ನು ಹೆತ್ತವರು ಕ್ಷಮಿಸುತ್ತಾರೆಯೆ?*



ಅವರು ಕ್ಷಮಿಸಿಯಾರು. ಆದರೆ ಮಕ್ಕಳಿಗೇ ತಮ್ಮನ್ನು ತಾವು ಕ್ಷಮಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

*ನೂರಾರು, ನೂರೆಂಟು, ನೂರಿಪ್ಪತ್ತೆಂಟು ಏಕೆ? ನೂರೇಳು, ನೂರಮೂವತ್ತು ಏಕಿಲ್ಲ ಸಾರ್?*

1+0+7=8; 1+3+0=4; 1+0+6=7; 1+0+8=9; 1+2+8=11. ಸಮಸಂಖ್ಯೆ ಸಮಾಪ್ತಿಯ ಸಂಕೇತ, ಬೆಸಸಂಖ್ಯೆ ವೃದ್ಧಿಯ ಸಂಕೇತ.

ಎಂ.ಎ. ಕುಮಾರ್, ಬೆಂಗಳೂರು

*ನಿರರ್ಗಳವಾಗಿ ಐದಾರು ಭಾಷೆ ಮಾತನಾಡುವವರ ಮಾತೃಭಾಷೆಯನ್ನು ಕಂಡುಹಿಡಿಯುವ ಬಗೆ ಹೇಗೆ?*

ಥಟ್ಟನೆ ತಣ್ಣನೆಯ ನೀರನ್ನು ಎರಚಿ. ಛಕ್ಕನೆ ಬೈಯಲು ಬಳಸುವ ಭಾಷೆಯೇ ಅವರ ಮಾತೃಭಾಷೆ.

ನೀಲಮ್ಮ ಕುಮಾರಪ್ಪ, ಲಿಂಗಸುಗೂರು

*ಸರಳತೆಯನ್ನೇ ಅಸಹಾಯಕತೆ ಎನ್ನುವವರಿಗೆ ಏನಂತೀರಿ ರಾಮ್‌ಜೀ?*

ಆಡಂಬರದ ಬೆಳಕಿನ ಪ್ರಖರತೆಯಿಂದ ಕುರುಡಾದವರು ಎನ್ನುತ್ತೇನೆ.

ಆರ್. ಮಧುಸೂದನ್, ಹಾಸನ

*ಬುದ್ಧನನ್ನು ಆರಾಧಿಸುವ ಚೀನಾ ಯುದ್ಧೋತ್ಸಾಹದಿಂದ ಕಾಲು ಕೆರೆಯುತ್ತಿರುವುದೇಕೆ?*

ಛೀ– ನಾ.. ಎನ್ನಬಹುದೇ?

ಆರತಿ ಘಟಿಕಾರ್, ದುಬೈ

*ಹುಲಿ, ಸಿಂಹಗಳು ವಾಸಿಸುವ ಕಾಡಿನ ಮಧ್ಯೆ ನೀವು ಕಳೆದುಹೋದರೆ ಏನು ಮಾಡುತ್ತೀರಿ?*

ಹ್ಞ! ತಲೆ ತಿನ್ನುವವರ ಮಧ್ಯೆಯೇ ಬದುಕಿದವನಿಗೆ ಕೇವಲ ದೇಹ ತಿನ್ನುವವರ ಮಧ್ಯೆ ಬದುಕಲು ಕಷ್ಟವಾಗದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಸರಸ ಮತ್ತು ವಿರಸ ಒಂದೇ ಕಡೆ ಸೇರಿದರೆ?*

ವಾಹ್! ಅದೇ ಶೃಂಗಾರದ ಉತ್ತುಂಗ; ರಮಿಸುವುದರಲ್ಲಿರುವ ರಮ್ಯತೆಯೇ ಪರಮ ರಮ್ಯತೆ.

ಪಿ.ಜಿ. ರಾಘವೇಂದ್ರ, ಮೈಸೂರು

*ಟೋಪಿ ಧರಿಸುವ ರಾಜಕಾರಣಿಗಳು ಕಾಣಿಸುತ್ತಿಲ್ಲವೇಕೆ?*

ಧರಿಸಿದ್ದುದನ್ನೆಲ್ಲ ಜನಗಳಿಗೆ ಹಾಕಿ ಆಗಿದೆಯಂತೆ; ಟೋಪಿ ಸ್ಟಾಕ್ ಇಲ್ಲವಂತೆ.

ಪಿ. ಜಯವಂತ ಪೈ, ಕುಂದಾಪುರ

*ಮಕ್ಕಳಾಗುವುದಕ್ಕೆ ಮದ್ದು ಕೊಡ್ತೇವೆ ಎನ್ನುವ ಡಾಕ್ಟ್ರಿಗೆ ಮಕ್ಕಳಿರುವುದಿಲ್ಲವಲ್ಲ, ಏಕೆ?*

ಬೇರುಬುದ್ಧಿ! ಸತ್ವವನ್ನೆಲ್ಲ ಕಾಂಡಕ್ಕೆ, ಹೂವಿಗೆ, ಹಣ್ಣಿಗೆ ಕೊಟ್ಟ ಬೇರು ರುಚಿಹೀನವಾಗಿಯೇ ಉಳಿಯುತ್ತದೆ.

## ಬಹುಮಾನಿತ ಪ್ರಶ್ನೆ

ಬಾ.ರಂ. ಸುರೇಶ್, ಶಿವಮೊಗ್ಗ

*ಹುಡುಗಿಯರು ತುಟಿಗೆ ಲಿಪ್‌ಸ್ಟಿಕ್ ಹಚ್ಚಿಕೊಳ್ಳುವುದರಿಂದ ಲಾಭವೇನು?*

ಗಂಡಿನ ದೃಷ್ಟಿ ಕೆಳಕ್ಕೆ ಸಾಗದಂತೆ ಸ್ವಲ್ಪ ಕಾಲವಾದರೂ ಸೆರೆಹಿಡಿಯುವುದು ಕಡಿಮೆ ಸಾಧನೆಯಲ್ಲವಲ್ಲ!

ಹಾಡ್ಯ ಬ. ಜಯಾನಂದ, ಮೈಸೂರು

*ಬದುಕಿಗೂ, ಶಿಕ್ಷಕನಿಗೂ ಇರುವ ಸಾಮ್ಯತೆ ಏನು? ವ್ಯತ್ಯಾಸವೇನು?*

ಪಾಠ ಕಲಿಸುವುದೇ ಸಾಮ್ಯತೆ; ಶಿಕ್ಷಕರದು ಪಾಠದ ನಂತರ ಪರೀಕ್ಷೆ; ಬದುಕಿನದು ಮೊದಲು ಪರೀಕ್ಷೆ, ಅದರಿಂದ ಪಾಠ.

ಭಾರತಿ ಮಾನಗೆ, ಹೊನ್ನಾವರ

*ನದಿಗಳನ್ನು ಏಕೆ ರಕ್ಷಿಸಬೇಕು?*



ನ – ನರಜನ್ಮ; ದಿ – ದಿವಿನಾಗಿರಲು.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

*ಈಗಿನ ಮಕ್ಕಳು ತಂದೆ ತಾಯಿ, ಗುರುಗಳಿಗಿಂತ ಹೆಚ್ಚಿನ ಗೌರವ, ವಿನಯವನ್ನು ಹೆಂಡತಿಗೆ ತೋರುವ ರಹಸ್ಯ?*

ಅನಿಶ್ಚಿತತೆ ಎಲ್ಲೆಲ್ಲಿರುವುದೋ ಅಲ್ಲಲ್ಲಿ ಭಯಮಿಶ್ರಿತ ಗೌರವ, ವಿನಯ ಇರುವುದು ಸಹಜ.

ಗಂಜಾಂ ನಾಗರಾಜ, ಮೈಸೂರು

*ವಿಶ್ವದ ಸರ್ವ ಸಂಪತ್ತಿಗೆ ಅಧಿದೇವತೆಯಾದ ಶ್ರೀಮಹಾಲಕ್ಷ್ಮಿಗೆ ನಾವು ಹಾಕುವ ಅಲ್ಪ ಕಾಣಿಕೆಯ ಅವಶ್ಯಕತೆ ಏನಿದೆ?*

ಅವಶ್ಯ ಎಂದಲ್ಲ; ಅದು ಆಕೆ ನಿಮಗೆ ನೀಡಿದ್ದಕ್ಕೆ ತೆರಬೇಕಾದ ಜಿಎಸ್‌ಟಿ (ಗಾಡೆಸ್ ಸರ್ವೀಸ್ ಟ್ಯಾಕ್ಸ್).

ಫಾಲನೇತ್ರ ಸಜ್ಜನ, ಶಿರಸಿ

*ಭಾರತದಲ್ಲಿ ವಿದೇಶಿ ಎಮ್ಮೆಗಳು ಏಕಿಲ್ಲ?*

ನಮ್ಮಲ್ಲೇ ಇಷ್ಟೊಂದು ಎಮ್ಮೆ(ಲೆ)ಗಳು ಇರುವಾಗ ಆಮದಿನ ಅಗತ್ಯವಿಲ್ಲವಂತೆ.

■ ರಾಮ್